23	ಕೊಪ್ಪಳ	1742	50
24	ಮಂಡ್ಯ	2220	306
25	ಮೈಸೂರು	2658	169
26	ರಾಯಚೂರು	2594	41
27	ಶಿವಮೊಗ್ಗ	2117	314
28	ತುಮಕೂರು	3562	519
29	ಉಡುಪಿ	1146	0
30	ಉತ್ತರ ಕನ್ನಡ	2522	157
	ಒಟ್ಟು	**61187**	**3331**

ಆಶಾ ಕಾರ್ಯಕರ್ತರರನ್ನು ಇಲಾಖೆಯಲ್ಲಿ ಖಾಯಂಗೊಳಿಸುವುದು

541 (694) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಆಶಾ ಕಾರ್ಯಕರ್ತರ ಸಂಖ್ಯೆ ಎಷ್ಟು; ಇವರುಗಳಿಗೆ ನಿಗದಿಪಡಿಸಿರುವ ಕಾರ್ಯಗಳೇನು (ವಿವರ ನೀಡುವುದು);

ಆ) ಆಶಾ ಕಾರ್ಯಕರ್ತರ ಸೇವೆಗೆ ಸರ್ಕಾರ ನೀಡುತ್ತಿರುವ ಗೌರವಧನ ಎಷ್ಟು (ವಿವರ ನೀಡುವುದು);

ಇ) ಆಶಾ ಕಾರ್ಯಕರ್ತಕರಿಗೆ ಮೂಲ ವೇತನ ನೀಡುವ ಮೂಲಕ ಅವರುಗಳಿಗೆ ಉತ್ತೇಜಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹೊರ ರಾಜ್ಯದವರಿಗಿಂತ ಇಲ್ಲಿನ ಆಶಾ ಕಾರ್ಯಕರ್ತರು ಪಡೆಯುತ್ತಿರುವ ಗೌರವಧನ ಬಹಳ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಅಸಮಾನತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿರುವ ಆಶಾ ಕಾರ್ಯಕರ್ತರ ಒಟ್ಟು ಸಂಖ್ಯೆ ನವೆಂಬರ್ 2012 ಅಂತ್ಯಕ್ಕೆ 29977 ಆಶಾ ಕಾರ್ಯಕರ್ತರಿಗೆ ನಿಗದಿಪಡಿಸಿರುವ ಕಾರ್ಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆಶಾ ಕಾರ್ಯಕರ್ತರಿಗೆ ಇಲಾಖೆಯು ಗೊತ್ತು ಪಡಿಸಿದ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದಕ್ಕೆ ಅನುಗುಣವಾಗಿ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಪ್ರೋತ್ಸಾಹ ಧನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ದರದಲ್ಲಿ ನೀಡಲಾಗುತ್ತಿದೆ.

ಉ) ಅನ್ವಯಿಸುವುದಿಲ್ಲ.

ಅನುಬಂಧ

ಆಶಾ ಕಾರ್ಯಕರ್ತರಿಗೆ ನಿಗದಿಪಡಿಸಿರುವ ಕಾರ್ಯಗಳು ಹಾಗೂ ಪ್ರೋತ್ಸಾಹಧನ ಈ ಕೆಳಕಂಡಂತೆ ಇದೆ.

1) 12 ವಾರದೊಳಗಿನ ಗರ್ಭಿಣಿಯರನ್ನು ನೊಂದಾಯಿಸಲು ಹಾಗೂ ಅವರಿಗೆ 100 ಐ.ಎಫ್.ಎ. ಮಾತ್ರೆಗಳನ್ನು ನುಂಗಿಸುವುದು ಮತ್ತು 4 ಬಾರಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದು – ರೂ.200/–
2) ಹೆರಿಗೆ ಆದ ನಂತರ 30 ದಿನಗಳೊಳಗೆ 6 ಬಾರಿ ತಾಯಿ ಮತ್ತು ನವಜಾತ ಶಿಶುಗಳನ್ನು ಭೇಟಿ ಮಾಡಿ ಆ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ತಪಾಸಣೆ ಹೋಗಲು ಮನವೊಲಿಸಿದರೆ – ರೂ. 250/– ಮತ್ತು ರೂ. 100/–
3) ಅಪೌಷ್ಟಿಕ ಮಕ್ಕಳನ್ನು ಗುರುತಿಸಿ ಅವರಿಗೆ ಅಂಗನವಾಡಿ ಕೇಂದ್ರದಲ್ಲಿ ಆಹಾರ ನೀಡುವಂತೆ ನೋಡಿಕೊಳ್ಳುವುದು– ರೂ.100/–

4) ಆಶಾ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿರುವಾಗ ನವಜಾತ ಮಕ್ಕಳಲ್ಲಿ ನೂನ್ಯತೆ ಕಂಡು ಬಂದಲ್ಲಿ ನವಜಾತ ಶಿಶುವಿನ ವಿಶೇಷ ಚಿಕಿತ್ಸಾ ಘಟಕಕ್ಕೆ ಮಕ್ಕಳನ್ನು ಕಳುಹಿಸಿ ಚಿಕಿತ್ಸೆ ಕೊಡಿಸುವುದು– ರೂ.100/–

5) ಚುಚ್ಚುಮದ್ದು ಕಾರ್ಯಕ್ರಮದಲ್ಲಿ ಓ.ಪಿ.ವಿ. 0 ಡೋಸ್/ ಹೆಪಟೈಟಿಸ್–ಬಿ (ಬರ್ತ್ ಡೋಸ್), ಬಿಸಿಜಿ, ಹಾಗೂ ಡಿಪಿಟಿ (3 ಡೋಸ್), ಪೋಲಿಯೋ (3 ಡೋಸ್), ಹೆಪಟೈಟಿಸ್–ಬಿ (3 ಡೋಸ್) 9 ತಿಂಗಳಿಂದ 12 ತಿಂಗಳವರೆಗೆ ಲಸಿಕೆಗಳನ್ನು ನೀಡಿದರೆ – ರೂ.100/–

6) ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಸೆಷನ್ ನಡೆಯುವ ಸ್ಥಳಕ್ಕೆ ಚುಚ್ಚುಮದ್ದು ಕೊಡಿಸಲು ಮಕ್ಕಳನ್ನು ಕರೆದೊಯ್ದುದಲ್ಲಿ ನೀಡತಕ್ಕದ್ದು – ರೂ. 100/–

7) ವಿಟಮಿನ್ ಎ ಕಾರ್ಯಕ್ರಮದಡಿಯಲ್ಲಿರುವ ಮಕ್ಕಳನ್ನು ಗುರುತಿಸಿ ಮಕ್ಕಳಿಗೆ ವಿಟಮಿನ್ ಎ ದ್ರಾವಣ ಅನ್ನು ಕೊಡಿಸಿದಲ್ಲಿ ಒಂದು ಕಾರ್ಯಕ್ರಮಕ್ಕೆ –ರೂ 100/–

8) ಸಾರ್ವತ್ರಿಕ ಲಸಿಕಾ ಕಾರ್ಯಕ್ರದಡಿಯಲ್ಲಿ ಸೆಶನ್ಸ್ ನಡೆದ ನಂತರ ಯಾವುದೇ (ಎ.ಯ.ಎಫ್.ಐ) ಅಡ್ಡಪರಿಣಾಮಗಳ ಪ್ರಕರಣಗಳು ವರದಿ ನೀಡಿ ಚಿಕಿತ್ಸೆ ಕೊಡಿಸಿದ್ದಲ್ಲಿ – ರೂ 100/–

9) ತಾಯಂದಿರ ಮರಣವನ್ನು ವರದಿ ಮಾಡಿದರೆ – ರೂ. 500

10) ವರ್ಷದ ಮಕ್ಕಳ ಮರಣ ಹೊಂದಿದ ಬಗ್ಗೆ 24 ಗಂಟೆ ಯೊಳಗೆ ಪ್ರಾ.ಆ.ಕೇಂದ್ರ ವೈದ್ಯಾಧಿಕಾರಿಗಳಿಗೆ ದೂರವಾಣಿ ಮೂಲಕ ವರದಿ ನೀಡಿದ್ದಲ್ಲಿ – ರೂ. 100

11) ಕುಟುಂಬ ಕಲ್ಯಾಣ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಮಹಿಳೆ ಯನ್ನು ಮನವೊಲಿಸಿದರೆ – ರೂ. 150

12) ಕುಟುಂಬ ಕಲ್ಯಾಣ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಪುರುಷರನ್ನು ಪ್ರೋತ್ಸಾಹಿಸಿ ಮನವೊಲಿಸಿದರೆ– ರೂ.200

13) ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ನೇರ ನಿಗಾವಣೆ ಕಡಿಮೆ ಅವಧಿಯ ಚಿಕಿತ್ಸೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪೂರ್ಣ ಪ್ರಮಾಣದ ಚಿಕಿತ್ಸೆಯನ್ನು ನೀಡಿಸಿ ಗುಣಮುಖ ಹೊಂದಿದರೆ ಆಶಾ ಕಾರ್ಯಕರ್ತೆ ಡಾಟ್ಸ್ ಪ್ರೋವೈಡರ್ ಆಗಿದ್ದರೆ– ರೂ.250

14) ರಾಷ್ಟ್ರೀಯ ಮಲೇರಿಯಾ, ಫಿಲೇರಿಯಾ, ಡೆಂಗ್ಯು, ಚಿಕುನ್ ಗುನ್ಯಾ, ಹಾಗೂ ಮೆದುಳು ಜ್ವರ ಕಾರ್ಯಕ್ರಮದಡಿಯಲ್ಲಿ ಆಶಾ ಕಾರ್ಯಕರ್ತೆಯು ಪಾಲ್ಗೊಂಡಿದಲ್ಲಿ ಹಾಗೂ ಸಾರ್ವಜನಿ ಕರಲ್ಲಿ ಅರಿವು ಮೂಡಿಸಿದ್ದಲ್ಲಿ – ರೂ 100/–

15) ಜ್ವರ ಬಂದಿರುವ ಪ್ರಕರಣಗಳಲ್ಲಿ ರಕ್ತ (Smear) ಪರೀಕ್ಷೆ ತೆಗೆದು ಅವರಿಗೆ ಔಷಧಿಗಳನ್ನು ನೀಡಿದ್ದಲ್ಲಿ ಒಂದು ಪ್ರಕರಣಕ್ಕೆ ರೂ.5/– ನಂತೆ ಒಂದು ತಿಂಗಳಿಗೆ ಗರಿಷ್ಠ 10 ಪ್ರಕರಣಗಳಿಗೆ – ರೂ.50/–

16) ಚರ್ಮದ ಮೇಲೆ ಮಚ್ಚೆಯಿದ್ದವರನ್ನು ಗುರುತಿಸಿ ಪಿ.ಹೆಚ್.ಸಿ. ವೈದ್ಯರಿಂದ ಕುಷ್ಠ ರೋಗವೆಂದು ದೃಢೀಕರಿ ಸಿದ್ದಲ್ಲಿ – ರೂ. 100/–

17) ಕುಷ್ಠರೋಗದ ಚಿಕಿತ್ಸೆ ಪೂರ್ಣಗೊಳಿಸಿದಲ್ಲಿ ಪಿ.ಹೆಚ್.ಸಿ. ವೈದ್ಯರಿಂದ ದೃಢೀಕರಿಸಿದಲ್ಲಿ MB & PB –ರೂ.400/–

18) ಆಶಾ ಕಾರ್ಯಕರ್ತೆಯರು ತಾವು ಕೆಲ ನಿರ್ವಹಿಸುವ ಹಳ್ಳಿಗಳಲ್ಲಿ ಔಟ್ ಬ್ರೇಕ್ ಆಗಿರುವಾಗ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಗೆ 24 ಗಂಟೆಗಳ ಒಳಗಡೆ ವರದಿ ಮಾಡಿದಲ್ಲಿ (ಉದಾ: ದಡಾರ, ವಾಂತಿಬೇದಿ. ಚಿಕನ್ ಗುನ್ಯ, ಮಲೇರಿಯ, ಡೆಂಗ್ಯೂ ಹಾಗೂ ಇತರೆ ಪ್ರಕರಣಗಳು) – ರೂ. 100/–

19) ಪ್ರತಿ ಮಾಸದಲ್ಲಿ ಗ್ರಾಮ ಮಟ್ಟದಲ್ಲಿ ನಡೆಯುವ ವಿ.ಹೆಚ್. ಎನ್.ಡಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಮತ್ತು ಕಾರ್ಯ ಕ್ರಮವನ್ನು ಏರ್ಪಡಿಸುವುದು. ಅಂತಹ ಸಂದರ್ಭದಲ್ಲಿ ಪ್ರತಿ ಒಂದು ಕಾರ್ಯಕ್ರಮಕ್ಕೆ ಪ್ರೋತ್ಸಾಹ ಧನ. (ಸಭೆಯ

ನಡಾವಳಿಗಳು ಮತ್ತು ಸಭೆಗೆ ಹಾಜರಾದ ಕನಿಷ್ಠ 20 ಫಲಾನುಭವಿಗಳ ಸಹಿಯನ್ನು ಪಡೆದಿರಬೇಕು) ರೂ.50/–

20) ಆಶಾ ಕಾರ್ಯಕರ್ತೆ ಪ್ರತಿ ನಿತ್ಯ ಮಾಡುವ ಕಾರ್ಯಕ್ರಮಗಳ ಬಗ್ಗೆ ಹಾಗೂ, ಪ್ರೋತ್ಸಾಹ ಧನ ನೀಡುವ ಬಗ್ಗೆ ಮತ್ತು ಗ್ರಾಮೀಣ ನೈರ್ಮಲ್ಯ ಸಮಿತಿ (ವಿ.ಹೆಚ್.ಎನ್.ಎಸ್.ಸಿ) ನೀಡಿರುವ ಮುಕ್ತ ನಿಧಿ ಉಪಯೋಗದ ಬಗ್ಗೆ ದಾಖಲಾತಿ ಗಳನ್ನು ನಿರ್ವಹಣೆ ಮಾಡಿರುವುದಕ್ಕೆ – ಒಂದು ಬಾರಿಗೆ ರೂ.500/– ನಂತೆ ವರ್ಷಕ್ಕೆ 2 ಬಾರಿ

21) ಆಶಾ ಕಾರ್ಯಕರ್ತೆಯರು ಪ್ರತಿ ವರ್ಷ ಮನೆ ಮನೆ ಬೇಟಿ ನೀಡಿ ಸಮೀಕ್ಷೆ ನಡೆಸಿ (CNAA) – ಅದರ ಬಗ್ಗೆ ದಾಖಲಾತಿ ಗಳನ್ನು ನಿರ್ವಹಿಸಿದ್ದಲ್ಲಿ – ರೂ 100/– (ವರ್ಷಕ್ಕೆ ಒಂದು ಬಾರಿ)

22) ಆಶಾ ಕಾರ್ಯಕರ್ತೆ ಗ್ರಾಮೀಣ ನೈರ್ಮಲ್ಯ ಸಮಿತಿ ಸಭೆ ಯನ್ನು ಆಯೋಜಿಸಿ ಎಲ್ಲಾ ಸದಸ್ಯರು ಹಾಜರಾಗುವಂತೆ ನೋಡಿಕೊಳ್ಳುವುದು ಮತ್ತು ಆ ಸಭೆಯಲ್ಲಿ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಕಡ್ಡಾಯವಾಗಿ ಚರ್ಚಿಸುವುದು ಅದಕ್ಕಾಗಿ ಪ್ರೋತ್ಸಾಹ ಧನ. – ರೂ. 50/–

23) ಆಶಾ ಕಾರ್ಯಕರ್ತೆಯರು ಎಂ.ಟಿ.ಪಿ ಪ್ರಕರಣಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಮತ್ತು ಎಂಟಿಪಿ ಮಾರ್ಗಸೂಚಿಗಳಂತೆ ಆರ್ಹರಿರುವ ಮಹಿಳೆಗೆ ಗರ್ಭ ಪಾತ ಮಾಡಿಸಿದ್ದಲ್ಲಿ– ರೂ 100/–

24) ಪ್ರತಿ ಮಾಸದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ನಡೆಯುವ ಸಭೆಗೆ ಹಾಜರಾಗಿ ಎಲ್ಲಾ ವರದಿಗಳನ್ನು ನೀಡುವುದು ಅಂತಹ ಸಂದರ್ಭದಲ್ಲಿ ಪ್ರಯಾಣ ಭತ್ಯೆ ಮತ್ತು ಇತರೆ ವೆಚ್ಚಗಳಿಗೆ ಪ್ರೋತ್ಸಾಹ ಧನ. – ರೂ 100/–

25) ಹೆಚ್ಐವಿ: ಹೆಚ್ಐವಿ ಸೋಂಕಿತ ಗರ್ಭಿಣಿ ಸ್ತ್ರೀಯರನ್ನು ಸಿಡಿಪೋರ್ ಪರೀಕ್ಷೆಗೆ, ಎಆರ್‌ಟಿಗೆ ಮತ್ತು ಹೆರಿಗೆಯ ಸಮಯದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದರೆ – ರೂ. 100/–

26) ಆಶಾ ಕಾರ್ಯಕರ್ತೆಯರು ಕೆಲಸ ನಿರ್ವಹಿಸುವ ಕ್ಷೇತ್ರ ಮಟ್ಟದಿಂದ ಫಲಾನುಭವಿಗಳನ್ನು ಪ್ರಾ. ಆ ಕೇಂದ್ರ/ ಸ. ಆ ಕೇಂದ್ರ / ಆಸ್ಪತ್ರೆಗಳಿಗೆ ಕರೆದೊಯ್ಯಲು ಪ್ರಯಾಣ ಭತ್ಯೆಯಾಗಿ ಪ್ರತಿ ತಿಂಗಳು 200 ರೂ. ಗಳಂತೆ ನೀಡುವುದು – ರೂ 200/–

ಶೂನ್ಯ ಬಡ್ಡಿದರ ಸಾಲ

542 (695) ಶ್ರೀ ಯು.ಟಿ. ಖಾದರ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿನ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ರೂಪಿಸಿರುವ ಮಾನದಂಡಗಳೇನು;

ಆ) ಈ ಯೋಜನೆಯಡಿ ಇದುವರೆವಿಗೂ ಎಷ್ಟು ರೈತರು ಇದರ ಪ್ರಯೋಜನ ಪಡೆದಿರುತ್ತಾರೆ; ಮರುಪಾವತಿಯಲ್ಲಿ ಸಾಧಿಸಿರುವ ಪ್ರಗತಿ ಎಷ್ಟು?

ಶ್ರೀ ಜಗದೀಶ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) ರಾಜ್ಯದಲ್ಲಿನ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ರೂಪಿಸಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮತ್ತು ಅರ್ಬನ್ ಬ್ಯಾಂಕುಗಳ ಮೂಲಕ ರಾಜ್ಯದ ರೈತರು ಅಲ್ಪಾವಧಿ ಬೆಳೆ ಸಾಲವನ್ನು ಪಡೆದಿರಬೇಕು.
2. ದಿನಾಂಕ: 01–04–2012 ರಿಂದ ಪಡೆದಂತಹ ಅಲ್ಪವಧಿ ಬೆಳೆ ಸಾಲಗಳಿಗೆ ಮಾತ್ರ ಯೋಜನೆಯು ಅನ್ವಯವಾಗುತ್ತದೆ.
3. ರೂ.1.00 ಲಕ್ಷದವರೆಗೆ ಪಡೆದಂತಹ ಸಾಲಗಳಿಗೆ ಮಾತ್ರ ಶೂನ್ಯ ಬಡ್ಡಿ ದರವು ಅನ್ವಯವಾಗುತ್ತದೆ.

ಆ) ಏಪ್ರಿಲ್ 2012 ರಿಂದ ಅಕ್ಟೋಬರ್ 2012ರ ವರೆಗೆ ಶೂನ್ಯ ಬಡ್ಡಿ ದರದಲ್ಲಿ 788981 ರೈತರು ರೂ.2443.24 ಕೋಟಿಗಳ ಸಾಲವನ್ನು ಪಡೆದಿರುತ್ತಾರೆ. ಶೂನ್ಯ ಬಡ್ಡಿದರದಲ್ಲಿ ವಿತರಿಸಿದ ಸಾಲಗಳಿಗೆ ಮರುಪಾವತಿ ಅವಧಿ ದಿನಾಂಕ: 01–04–2013 ರಿಂದ ಪ್ರಾರಂಭವಾಗುತ್ತದೆ.